DITTO WS

Reg. No. : ....................................

Name : ..........................................

**FY-416**

**FIRST YEAR HIGHER SECONDARY EXAMINATION, MARCH 2023**

Part – III

**KANNADA**

Maximum : 80 Scores

Time : 2½ Hours

Cool-off time : 15 Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ 15 ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. ಜೇಡರ ದಾಸಿಮಯ್ಯನ ವಚನದಲ್ಲಿ ಕಂಡು ಬರುವ ಅಂಕಿತವೇನು ?

   (ಸರ್ವಜ್ಞ, ಕೂಡಲಸಂಗಮದೇವ, ರಾಮನಾಥ, ಚೆನ್ನಮಲ್ಲಿಕಾರ್ಜುನ)

2. ದಯವೇ _______ ಮೂಲವಯ್ಯ

   (ಬದುಕಿನ, ಮನುಷ್ಯನ, ಕವನದ, ಧರ್ಮದ)

3. ಕರ್ನಾಟಕ ಸಂಗೀತದ ಪಿತಾಮಹ ಯಾರು ?

   (ಕನಕದಾಸ, ಪುರಂದರದಾಸ, ಸೂರದಾಸ, ವಿಠಲದಾಸ)

4. ಪೆಂಟಯ್ಯನು ಯಾವ ಸಿನೆಮಾ ನೋಡಬೇಕೆಂದಿದ್ದನು ?

   (ಶಂಕರಾಭರಣ, ಅಡವಿರಾಮುಡು, ಬಾಹುಬಲಿ, ರಾಜಾ ಹರಿಶ್ಚಂದ್ರ)

(5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.) **(4 × 1 = 4)**

5. ಮುದ್ರಾಮಂಜೂಷ – ಈ ಕೃತಿಯನ್ನು ಬರೆದವರು ಯಾರು ?

6. ಕಂಪು – ಈ ಪದದ ಅರ್ಥವನ್ನು ಬರೆಯಿರಿ.

7. ನಿದ್ರಾ – ಈ ಪದದ ತದ್ಭವ ರೂಪವನ್ನು ಬರೆಯಿರಿ.

8. ಬ್ಯೆಬ್ಯಾಡ, ಭೇದಿಲ್ಲ – ಇವುಗಳ ಶಿಷ್ಟರೂಪವೇನು ?

9. ತಲೆಯೆತ್ತಿ – ಇಲ್ಲಿರುವ ಸಂಧಿ ಯಾವುದು ?

10. ಅಮಮೇನಚ್ಚರಿಯೋ – ಈ ಪದವನ್ನು ವಿಂಗಡಿಸಿ ಬರೆಯಿರಿ.

**(11 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.) (5 × 2 = 10)**

11. ಬಳೆಗಾರನು ಬುದ್ಧಿವಂತನಾದುದರಿಂದ ಸಂತೆಯಲ್ಲಿ ಒಳ್ಳೆ ಲಾಭ ಪಡೆದನು. – ಈ ವಾಕ್ಯದಲ್ಲಿ ಬಂದಿರುವ ತದ್ಧಿತ ಪ್ರತ್ಯಯಗಳನ್ನು ಆರಿಸಿರಿ.

12. ಅಯ್ಯೋ ಪಿರಿ ಪಿರಿ ಮಳೆ ಮೈದಾನದಲ್ಲಿ ಆಟವಾಡುವುದಾದರೂ ಹೇಗೆ ? ಅಗತ್ಯವಾದ ಲೇಖನ ಚಿಹ್ನೆಗಳನ್ನು ಬಳಸಿ ವಾಕ್ಯವನ್ನು ಪುನಃ ಬರೆಯಿರಿ.

13. ಪೊಲೀಸರು ಅಟ್ಟಿಸಿಕೊಂಡು ಬರುವಾಗ ಕಳ್ಳನು ಕಾಲಿಗೆ ಬುದ್ಧಿ ಹೇಳುವನು. – ಅಡಿಗೆರೆ ಎಳೆದ ಪದವನ್ನು ಬಳಸಿ ಬೇರೊಂದು ವಾಕ್ಯ ಬರೆಯಿರಿ.

14. ಭೂಮಿ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ಸೂಚಿಸಿರಿ.

15. ಜಲಮಲಿನೀಕರಣವನ್ನು ತಡೆಗಟ್ಟಲು ಅಗತ್ಯವಾದ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

DITTO WS

16. ಕೆಳಗಿನ ವಾಕ್ಯದಲ್ಲಿರುವ ಅಕ್ಷರತಪ್ಪುಗಳನ್ನು ಸರಿಪಡಿಸಿ ಬರೆಯಿರಿ.

ಊರುಕೇರಿಗಳಲಿ ನಾಯಿಗಳ ಕಟ ಬಹಲ ಹೆಚಿದೆ. ಚಿಕ ಮಕಳಿಗೆ ಸತಂತ್ರವಾಗಿ ನಡೆಯಲು ಸಾಧ್ಯವಾಗುವುದಿಲ್ಲ

17. ಕೆಳಗಿನ ವಾಕ್ಯದಲ್ಲಿ ಇರುವ ಅನುಕರಣ ವಾಚಿ ಪದವನ್ನು ಗುರುತಿಸಿರಿ.

ಪಳಪಳನೆ ಹೊಳೆಯುವ ಕತ್ತಿಯನ್ನು ಕಂಡು ಹೆದರಿದೆನು.

**(18 ರಿಂದ 22 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.)** **(4 × 4 = 16)**

18. 'ಪೆಟ್ರೋಮ್ಯಾಕ್ಸ್ ಹೊತ್ತವರು' ಕವನದಲ್ಲಿ ಬಡಜನತೆಯ ಜೀವನಚಿತ್ರಣ ಕವನದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

19. ತಲೆಮಾರುಗಳ ಸ್ವಭಾವ ರೂಪೀಕರಣ ಹಿರಿಯರಿಂದಲೇ ಬದಲಾವಣೆಯಾಗುತ್ತಿದೆ ಎಂಬುದು 'ಬೆಳಸು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

20. 'ಬೆಳ್ಳಗಿರುವುದೆಲ್ಲ ಹಾಲಲ್ಲ' – ಈ ಗಾದೆಮಾತನ್ನು 'ಅಶ್ವತ್ಥಾಮ' ಕವಿತೆಯ ಆಧಾರದಲ್ಲಿ ವಿಶದಪಡಿಸಿರಿ.

21. ನಿಮ್ಮೂರಿನ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ವಿನಂತಿಸಿಕೊಂಡು ಜಿಲ್ಲಾಧಿಕಾರಿಯವರಿಗೆ ನೀಡಲು ಒಂದು ಮನವಿಪತ್ರವನ್ನು ಬರೆಯಿರಿ.

22. 'ಪಂಜರ ಪರೀಕ್ಷೆ' ಪಾಠದ ಆಧಾರದಲ್ಲಿ ಚಂದ್ರಗುಪ್ತ ಮೌರ್ಯನ ಪಾತ್ರಚಿತ್ರಣ ಮಾಡಿರಿ.

**(23 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(5 × 6 = 30)**

23. ಶಕುಂತಲೆಯ ಮಾನವೀಯ ಗುಣ 'ಹೇಮಕೂಟದಿಂದ ಬಂದಮೇಲೆ' ಎಂಬ ಗದ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿಶದೀಕರಿಸಿರಿ.

24. ಬುದ್ಧನ ಮಹನೀಯತೆ ವೈಶಾಖ ಪೂರ್ಣಿಮೆಯ 'ಮಾರ್ತಂಡನುದಯಿಸಿದಂ' ಎಂಬ ಖಂಡಕಾವ್ಯದಲ್ಲಿ ವ್ಯಕ್ತವಾದ ಬಗೆ ಹೇಗೆ ? ವಿವರಿಸಿರಿ.

25. 'ಬಾಶಿಂಗ ಬಲ' ಕಥೆಯಲ್ಲಿ ಹಳ್ಳಿಯ ಜನಜೀವನ, ನಂಬಿಕೆ ಇವುಗಳು ಮೂಡಿಬಂದ ರೀತಿಯನ್ನು ವಿವರಿಸಿರಿ.

26. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯರ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ ಎಂಬುದು 'ಚಂದ್ರಗಿರಿಯ ತೀರದಲ್ಲಿ' ಹೇಗೆ ವ್ಯಕ್ತವಾಗಿದೆ ಎಂಬುದರ ಕುರಿತು ವಿವರಿಸಿ ಟಿಪ್ಪಣಿ ಬರೆಯಿರಿ.

27. ಪ್ರಾಮಾಣಿಕತೆಯನ್ನು ಹೇಗೆ ಸಮಾಜಕ್ಕೆ ತಿಳಿಸಬಹುದು ಎಂಬುದನ್ನು ಹಸು ಪುಣ್ಯಕೋಟಿಯ ಪಾಠದಲ್ಲಿ ಗುರುತಿಸಬಹುದು. ಇದು ಇಂದಿನ ತಲೆಮಾರಿಗೆ ಎಷ್ಟರಮಟ್ಟಿಗೆ ಪ್ರಭಾವ ಬೀರಬಹುದು ? ಕಿರುಲೇಖನ ಬರೆಯಿರಿ.

28. ಯಕ್ಷಗಾನ ಹಾಗೂ ತಾಳಮದ್ದಳೆಯ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿರಿ.

**(29 ರಿಂದ 31 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(2 × 8 = 16)**

29. ನೀವು ಕೈಗೊಂಡ ಶೈಕ್ಷಣಿಕ ಪ್ರವಾಸದ ಅನುಭವದ ಕುರಿತು ಪ್ರವಾಸ ಲೇಖನವನ್ನು ಬರೆಯಿರಿ.

30. 'ಜನಜೀವನದ ಮೇಲೆ ಸಮೂಹ ಮಾಧ್ಯಮದ ಪ್ರಭಾವ' ಎಂಬ ವಿಷಯದ ಕುರಿತು ಪ್ರಬಂಧವೊಂದನ್ನು ಬರೆಯಿರಿ.

31. 'ಏಳಯ್ಯ ಬೆಳಗಾಯಿತು' – ಈ ಹಾಸ್ಯ ಲೇಖನದ ಸ್ವಾರಸ್ಯಕರ ಅಂಶಗಳನ್ನು ಗುರುತಿಸಿ ಬರೆಯಿರಿ.